2) ದಿನಾಂಕ 31-3-94 ರವರೆಗೆ ನೀರಾವರಿ 14.28 ಲಕ್ಷ ಹೆಕ್ಟೇರ್‌ಗಳು.

ಧಾರವಾಡ ಜಿಲ್ಲೆಯ ಎ ಮತ್ತು ಬಿ ನೌಕರುಗಳ ಬಗ್ಗೆ

111 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಜನ ಸ್ಥಳೀಯ ಎ ಮತ್ತು ಬಿ ಸರ್ಕಾರಿ ನೌಕರರು ತಮ್ಮ ಸ್ವ-ತಾಲ್ಲೂಕಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ?

ಆ) ಎ ಮತ್ತು ಬಿ ವರ್ಗದ ನೌಕರರನ್ನು ಅವರವರ ಸ್ವಂತ ತಾಲ್ಲೂಕಿನಲ್ಲಿ ನೌಕರಿ ಮಾಡದಿರಲು ಸರ್ಕಾರದ ಆಜ್ಞೆ ಇದೆಯೇ?

ಇ) ಹಾಗಿದ್ದರೆ, ಸ್ವ-ಸ್ಥಳ , ತಾಲ್ಲೂಕಿನಲ್ಲಿ ನೌಕರಿ ಮಾಡುವವರನ್ನು ವರ್ಗಾವಣೆ ಮಾಡಲು ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು):

ಅ) ಸರ್ಕಾರದ ಮಟ್ಟದಲ್ಲಿ ಈ ಬಗ್ಗೆ ಉತ್ತರಿಸಲು ಸದ್ಯದಲ್ಲಿ ಮಾಹಿತಿಗಳಿಲ್ಲ.

ಆ) ಹೌದು.

ಇ) ಸರ್ಕಾರದ ಮಾರ್ಗಸೂಚನೆಗಳನ್ವಯ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿರುವ ಕಾರಾಗೃಹಗಳನ್ನು ಸುಧಾರಣೆಗಳನ್ನು ತರುವಲ್ಲಿ ಡಾ|| ಕಿರಣ್ ಬೇಡಿಯವರ ನೆರವು

258 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಕಾರಾಗೃಹಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ವಿವಿಧ ಕಾರಾಗೃಹಗಳಲ್ಲಿರುವ ಖೈದಿಗಳ ಒಟ್ಟು ಸಂಖ್ಯೆ ಎಷ್ಟು? (ವಿವಿಧ ವರ್ಗಗಳ ಖೈದಿಗಳ ಬಗ್ಗೆ ವಿವರಗಳನ್ನು ನೀಡುವುದು)

ಆ) ಈ ಖೈದಿಗಳ ಜೀವನ ಮಟ್ಟವನ್ನು ಸುಧಾರಿಸಲು ಹಾಗೂ ಅವರುಗಳಲ್ಲಿ ಮಾನಸಿಕ ಸ್ಥೈರ್ಯವನ್ನು ತುಂಬಿ ಅವರುಗಳ ಮನಪರಿವರ್ತನೆಗಾಗಿ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಜೈಲಿನ ಸುಧಾರಣೆಗಾಗಿ ಮೆಗಾಸೆಸ್ಸ್ ಪ್ರಶಸ್ತಿಯನ್ನು ಪಡೆದಿರುವ ಡಾ|| ಕಿರಣ್ ಬೇಡಿ, ಕಾರಾಗೃಹಗಳ ಮಹಾ ನಿರ್ದೇಶಕರು, ನವದೆಹಲಿ, ಇವರ ಸಲಹೆಯನ್ನು ಪಡೆಯಲು ಸರ್ಕಾರದವರು ಪರಿಶೀಲಿಸುವರೇ?

ಈ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎನ್. ಮಿರಾಜುದ್ದೀನ್ ಪಾಟೀಲ್ (ಕಾರಾಗೃಹಗಳ ರಾಜ್ಯ ಸಚಿವರು) :

ಅ) ಒಟ್ಟು 6,644

ಖೈದಿಗಳ ವಿವಿಧ ವರ್ಗಗಳ ವಿವರಗಳು:

		ಪುರುಷರು	ಮಹಿಳೆಯರು
1)	ವಿಚಾರಣಾ ಬಂಧಿಗಳು	5000	123
2)	ಸಹಾ ಖೈದಿಗಳು	1348	30
3)	ಕಾಫಿಮೋಸಾ ಕಾಯ್ದೆ ಯಡಿಯ ಡೆಟ್‌ನ್ಯೂಗಳು	1	-
4)	ಗೂಂಡಾ ಕಾಯ್ದೆಯಡಿಯ ಬಂಧಿಗಳು	7	-

5)	ಸಿವಿಲ್ ಬಂಧಿಗಳು	2	
6)	ನಾರ್ಕೊಟಿಕ್ ಡ್ರಗ್ಸ್ ಮತ್ತು ಸೈಕೋ ಟ್ರೋಪಿಕ್ ಸಬ್ಸ್ ಟ್ರಾನ್ಸ್ ಆರ್ಡಿನೆನ್ಸ್ ಕಾಯ್ದೆಯ ಬಂಧಿಗಳು	5	
7)	ಭಯೋತ್ಪಾದಕ ಮತ್ತು ವಿಧ್ವಂಸಕ ಕೃತ್ಯಗಳನ್ನು ತಡೆಹಿಡಿಯುವ ಶಾಸನದಡಿಯಲ್ಲಿ ಬಂಧಿಗಳು (ಟಾ.ಡಾ.ಕಾಯ್ದೆಯಡಿಯಲ್ಲಿ)	117	11
	ಒಟ್ಟು	6400	164

ಆ)1)ಬಂಧಿಗಳ ಇಚ್ಛೆಗನುಗುಣವಾಗಿ ವಿವಿಧ ವೃತ್ತಗಳಲ್ಲಿ ವೃತ್ತಿ ಶಿಕ್ಷಣ ತರಬೇತಿ.

2) ಆಧುನಿಕ ರೀತಿಯಲ್ಲಿ ಕೃಷಿ ಮತ್ತು ತೋಟಗಾರಿಕೆ ತರಬೇತಿ.

3) ಮಜೂರಿ ಗಳಿಕೆ ಯೋಜನೆ

4) ಶಿಕ್ಷಣ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು

5) ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು

6) ಸಂದರ್ಶನ, ಪತ್ರ ವ್ಯವಹಾರ ಹಾಗೂ ಮಾಫಿ ಪದ್ಧತಿ

7) ಉಪಹಾರ ಗೃಹದ ಅನುಕೂಲತೆ

8) ಪಂಚಾಯಿತಿ ಪದ್ಧತಿ

9) ಪೇರೋಲ್ ಫರ್ಲೋ ತಾತ್ಕಾಲಿಕ ಬಿಡುಗಡೆ

10) ವಿವಶ್ಯನ ಧ್ಯಾನ ಶಿಬಿರಗಳು ಹಾಗೂ ಪ್ರಾರ್ಥನೆಗಳು

ಇ) ಶ್ರೀಮತಿ ಕಿರಣ್ ಬೇಡಿ ಇವರ ಸಲಹೆಯನ್ನು ಪಡೆಯುವ ಉದ್ದೇಶ ಸರ್ಕಾರಕ್ಕೆ ಇದೆ.

ಈ) ಪರಿಶೀಲನೆಯಲ್ಲಿದೆ.

ನಗರದ ಸ್ಯಾಂಕಿ ಕೆರೆಯಲ್ಲಿ ಮಕ್ಕಳ ಚಲನಚಿತ್ರ ಸಂಕೀರ್ಣ ಕಟ್ಟುವುದು

241-ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಉತ್ತರಭಾಗದಲ್ಲಿರುವ ಸ್ಯಾಂಕಿ ಕೆರೆಯಲ್ಲಿ ಸುಮಾರು 4.30 ಎಕರೆ ಜಮೀನನ್ನು ಮಕ್ಕಳ ಚಲನಚಿತ್ರ ಸಂಕೀರ್ಣ ಹಾಗೂ ಫಿಲಂ ಲ್ಯಾಬರೇಟರಿಯನ್ನು ನಿರ್ಮಿಸಲು ಗುತ್ತಿಗೆ ಆಧಾರದ ಮೇಲೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮಹಾನಗರ ಪಾಲಿಕೆ ಸಂಕೀರ್ಣ ನಿರ್ಮಿತ ಜಾಗದ ಗುತ್ತಿಗೆಯನ್ನು ರದ್ದುಗೊಳಿಸುವ ನಿರ್ಧಾರ ಕೈಗೊಂಡಿರುವುದು ನಿಜವೇ?

ಇ) ಸಂಕೀರ್ಣ ನಿರ್ಮಾಣ ಮಾಡಬೇಕಾದ ಜಾಗದಲ್ಲಿ ಸುಮಾರು 200ಕ್ಕೂ ಹೆಚ್ಚು ಚೆನ್ನಾಗಿ ಬೆಳೆದ ವೃಕ್ಷಗಳಿದ್ದು ಪರಿಸರ ಪ್ರೇಮಿಗಳು ಈ ಸಂಕೀರ್ಣದ ವಿರುದ್ಧ ಆತಂಕ ವ್ಯಕ್ತಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಾದರೆ ಬೆಂಗಳೂರಿನ ಕೆರೆಗಳ ಪೈಕಿ ಒಂದಾದ ಸ್ಯಾಂಕಿ ಕೆರೆಯ ನಾಶ ತಡೆಯಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :